## ಅನುಬಂಧ–I

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1246(1748) |
| ಸದಸ್ಯರ ಹೆಸರು | ಶ್ರೀ ಅಕ್ಕಿ ಮಲ್ಲಿಕಾರ್ಜುನ ಸಹದೇವಪ್ಪ (ಕುಂದುಗೋಳ) |
| ಉತ್ತರಿಸುವ ಸಚಿವರು | ಶ್ರೀ ಗೋವಿಂದ ಎಂ ಕಾರಜೋಳ (ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು ) |

ಅ) ರಾಜ್ಯದಲ್ಲಿ ಪರಿಷ್ಕರಿಸಿದ ಪಡಿತರ ಚೀಟಿಯ ಫಲಾನುಭವಿಗಳ ಪಟ್ಟಿ ಸಿದ್ದವಾಗಿದೆಯೇ (ವಿವರ ನೀಡುವುದು)

ಹೌದು, ರಾಜ್ಯದಲ್ಲಿ ವಿತರಿಸಿರುವ ತಾತ್ಕಾಲಿಕ ಪಡಿತರ ಕೂಪನ್‌ಗಳ ವಿವರ ಕೆಳಕಂಡಂತಿದೆ (ಬೆಂಗಳೂರು ಅಪ ಪ್ರದೇಶ ಹಾಗೂ ಬೆಂಗಳೂರು ನಗರ ಜಿಲ್ಲೆಯ 7 ನಗರಸಭೆಯೂ ಸೇರಿ) –

| | |
|---|---|
| ಅನ್ನಪೂರ್ಣ | 25,452 |
| ಎಎವೈ | 11,75,912 |
| ಬಿಪಿಎಲ್(ಅಕ್ಷಯ)– | 53,87,103 |
| ಎಪಿಎಲ್ | 52,93,443 |
| ಒಟ್ಟು | 1,18,81,910 |

ಆ) ರಾಜ್ಯದಲ್ಲಿ ಪಡಿತರ ಚೀಟಿಯನ್ನು ಹೊಂದಿರುವವರೆಷ್ಟು ಹಾಗೂ ಪಡಿತರ ಚೀಟಿ ವಿತರಣೆಯಲ್ಲಿ ಅನುಸರಿಸುತ್ತಿರುವ ಮಾನದಂಡವೇನು,

ರಾಜ್ಯದಲ್ಲಿ ವಿತರಿಸಿರುವ ತಾತ್ಕಾಲಿಕ ಪಡಿತರ ಕೂಪನ್ ಹಾಗೂ ಬೆಂಗಳೂರು ಅಪ ಪ್ರದೇಶ ಹಾಗೂ ಬೆಂಗಳೂರು ನಗರ ಜಿಲ್ಲೆಯ 7 ನಗರ ಸಭೆ ಸೇರಿಕೊಂಡು ತಾತ್ಕಾಲಿಕ ಪಡಿತರ ಚೀಟಿ ಹೊಂದಿರುವವರು 1,18,81,910

ಗ್ರಾಮಾಂತರ ಪ್ರದೇಶದಲ್ಲಿ ಗರಿಷ್ಟ 12,000/– ರೂ ಗಳ ವಾರ್ಷಿಕ ವರಮಾನ, ಪಟ್ಟಣ ಪ್ರದೇಶದಲ್ಲಿ ಗರಿಷ್ಟ 17,000/– ರೂ ಗಳ ವಾರ್ಷಿಕ ವರಮಾನ ಆದಾಯವುಳ್ಳ ಕುಟುಂಬಗಳಿಗೆ ಎಪಿಎಲ್ ಪಡಿತರ ಚೀಟಿಯನ್ನು ವಿತರಿಸಲಾಗಿರುತ್ತದೆ

ಈ ಕೆಳಕಂಡ ಮಾನದಂಡಗಳಿಗೆ ಒಳಪಟ್ಟ ಫಲಾನುಭವಿಗಳು ಅಕ್ಷಯ (ಬಿಪಿಎಲ್) ಪಡಿತರ ಚೀಟಿ ಪಡೆಯಲು ಅನರ್ಹರು

1) ಮೂರು ಹೆಕ್ಟೇರ್ ಅಥವಾ ಅದಕ್ಕಿಂತ ಹೆಚ್ಚು ಭೂಮಿ ಹೊಂದಿರುವವರು
2) ಸ್ಥಿರ ದೂರವಾಣಿ ಹೊಂದಿರುವವರು
3) ಸ್ವಂತವಾಗಿ ಯಾರೇ ಡೀಸಲ್/ಪೆಟ್ರೋಲ್ ಇಂಧನ ಬಳಸುವ ವಾಹನ ಹೊಂದಿರುವವರು (ಲೂನಾ/ಟಿವಿಎಸ್ ಹೊಂದಿರುವವರನ್ನು ಹೊರತುಪಡಿಸಿ)
4) ಬ್ಯಾಂಕ್/ಸಹಕಾರಿ ಸಂಪಗಳಲ್ಲಿ 100 ಲಕ್ಷಕ್ಕೂ ಮೇಲ್ಪಟ್ಟು ಸಾಲ ಪಡೆದಿರುವವರು, ಒಂದು ಬೋರ್ ವೆಲ್ ಹೊಂದಿ, ನೀರಾವರಿ ಸೌಕರ್ಯ
5) ಪಡೆಯುತ್ತಿರುವವರು
6) ತಿಂಗಳಿಗೆ ರೂ 1,000/–ಕ್ಕೆ ಕಡಿಮೆ ಇಲ್ಲದೆ ವೇತನ ಪಡೆಯುವ ಸರ್ಕಾರಿ/ ಸರ್ಕಾರೇತರ/ ಖಾಸಗಿ ಸಿಬ್ಬಂದಿಗಳು
7) ಆದಾಯ ತೆರಿಗೆ ಪಾವತಿಸುವವರು
8) ರಿಜಿಸ್ಟ್ರಡ್ ಕಾಂಟ್ರಾಂಕ್ಟರ್, ಎಪಿಎಂಸಿ ಟ್ರೇಡರ್ಸ್/ಕಮೀಷನ್ ಏಜೆಂಟ್ಸ್/Dealers in Seeds/Fertilizers, etc ,

ಒಟ್ಟಾರೆ ಸಮೀಕ್ಷೆ ಮಾಡುವ ಸಂದರ್ಭದಲ್ಲಿ ಕುಟುಂಬದ ಜೀವನ ಮಟ್ಟವನ್ನು ಕೂಡ ಸಮೀಕ್ಷೆ ಮಾಡಿ ನಿರ್ಣಯಿಸುವುದು ತದನಂತರ ನೀಡಿದ ನಗರ ಪ್ರದೇಶಕ್ಕೆ ಮಾರ್ಗಸೂಚಿಗಳಲ್ಲಿ ಈ ಕೆಳಕಂಡ ಮಾನದಂಡಗಳನ್ನು ನಿಗದಿಪಡಿಸಲಾಗಿರುತ್ತದೆ

20' X 30' ಚದರ ಅಡಿ ಅಥವಾ

1) ಅದಕ್ಕಿಂತ ಕಡಿಮೆ ಅಳತೆಯುಳ್ಳ ನಿವೇಶನ ಅಥವಾ ಸರ್ಕಾರದ ಯಾವುದೇ ಗೃಹ ನಿರ್ಮಾಣ ಯೋಜನೆ ಅಡಿಯಲ್ಲಿ ಉಚಿತವಾಗಿ ಮನೆ ನೀಡಿರುವ ಕುಟುಂಬಗಳನ್ನು ಬಿಪಿಎಲ್‌ಗೆ ಒಳಪಟ್ಟಿರುವರೆಂದು ಪರಿಗಣಿಸುವುದು
2) ರಸ್ತೆ ಬದಿಯಲ್ಲಿ ಹಾಗೂ ಸಣ್ಣಪ್ರಮಾಣದ ಪೆಟ್ಟಿಗೆ ಅಂಗಡಿಗಳನ್ನು ಇಟ್ಟುಕೊಂಡು ಜೀವನೋಪಾಯಕ್ಕಾಗಿ ವ್ಯವಹಾರ ಮಾಡುತ್ತಿರುವವರನ್ನು ಹೊರತುಪಡಿಸಿ ಉಳಿದ ಸ್ವಂತ ಅಥವಾ ಬಾಡಿಗೆ ಅಂಗಡಿಗಳಲ್ಲಿ ವ್ಯಾಪಾರ ನಡೆಸುತ್ತಿರುವವರು ಎಪಿಎಲ್ ಅಥವಾ ಗೌರವಾನ್ವಿತ ಪಡಿತರ ಚೀಟಿಗೆ ಅರ್ಹರಿರುವರು

3) ವಾಸದ/ವಾಣಿಜ್ಯ ಉದ್ದೇಶಕ್ಕಾಗಿ ನೀಡಲಾಗಿರುವ ಅಥವಾ ಪಡೆಯಲಾಗಿರುವ ಕಟ್ಟಡಗಳಿಂದ ಬರುವ ಬಾಡಿಗೆ ಮಾಸಿಕ ರೂ 2000/– ಮೀರುವವರು ಬಿಪಿಎಲ್ ಪಡಿತರ ಚೀಟಿಗೆ ಅರ್ಹರಿರುವುದಿಲ್ಲ

ಇ) ಧಾರವಾಡ ಜಿಲ್ಲೆಯಲ್ಲಿ ಪಡಿತರ ಚೀಟಿಯನ್ನು ಸಂಪೂರ್ಣವಾಗಿ ವಿತರಿಸಲಾಗಿದೆಯೇ,

ಇಲ್ಲ ಧಾರವಾಡ ಜಿಲ್ಲೆಯಲ್ಲಿ ಒಟ್ಟು 3,64,383 ಗಣಕೀಕೃತ ಕೂಪನ್‌ಗಳನ್ನು ಮುದ್ರಿಸಲಾಗಿದ್ದು ಈ ಪೈಕಿ 3,48,384 ಕೂಪನ್‌ಗಳನ್ನು ವಿತರಿಸಲಾಗಿರುತ್ತದೆ 15,999 ಕೂಪನ್‌ಗಳನ್ನು ವಿತರಿಸಲು ಬಾಕಿ ಇರುತ್ತದೆ ಬಾಕಿ ಇರುವ ಕೂಪನ್‌ಗಳಲ್ಲಿ ಅನ್ನಪೂರ್ಣ 60, ಎಎವೈ 582, ಬಿಪಿಎಲ್ 2744 ಮತ್ತು ಎಪಿಎಲ್ 12,613 ಗಳಿದ್ದು ಎಪಿಎಲ್ ಫಲಾನುಭವಿಗಳು ಪಡಿತರ ಚೀಟಿ ಪಡೆಯಲು ಮುಂದೆ ಬಾರದ ಕಾರಣ ಬಾಕಿ ಉಳಿದಿರುತ್ತವೆ

ಈ) ಯಾವ ಯಾವ ವಿಧಗಳ ಪಡಿತರ ಚೀಟಿಯನ್ನು ವಿತರಣೆ ಮಾಡಲಾಗಿದೆ,

ಧಾರವಾಡ ಜಿಲ್ಲೆಯಲ್ಲಿ ವಿತರಣೆ ಮಾಡಿರುವ ವಿವಿಧ ವರ್ಗಗಳ ಪಡಿತರ ಚೀಟಿಗಳು ಕೆಳಕಂಡಂತಿರುತ್ತದೆ –

| | |
|---|---|
| ಅನ್ನಪೂರ್ಣ | 990 |
| ಅಂತ್ಯೋದಯಅನ್ನ ಯೋಜನೆ | 32,192 |
| ಬಿಪಿಎಲ್(ಅಕ್ಷಯ) | 1,66,053 |
| ಎಪಿಎಲ್ | 1,49,149 |
| ಒಟ್ಟು | 3,48,384 |

ಧಾರವಾಡ ಜಿಲ್ಲೆಯಲ್ಲಿ ಪಡಿತರ ಚೀಟಿಯನ್ನು ಹಂಚುವ ಸಂದರ್ಭದಲ್ಲಿ ಅವ್ಯವಹಾರವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇಲ್ಲ